ಒಂದು ಸ್ವೀಟ್‌ಸ್ಟಾಲ್ ಎದುರಿಗೆ ಹೀಗೊಂದು ಬೋರ್ಡ್ ಹಾಕಲಾಗಿತ್ತು 'ಇದು ದೇಶಿ ತುಪ್ಪದ ಸಿಹಿತಿನಿಸುಗಳ ನೂರಾ ಐವತ್ತು ವರ್ಷ ಹಳೆಯ ಅಂಗಡಿ. ಬನ್ನಿ, ನಿಮಗೆ ಬೇಕಾದ ಸಿಹಿ ತಿನಿಸುಗಳನ್ನು ಆಯ್ಕೆ ಮಾಡಿ ತಿನ್ನಿ. ದುಡ್ಡಿನ ಬಗ್ಗೆ ಚಿಂತಿಸಬೇಡಿ. ಅದನ್ನು ನಿಮ್ಮ ಮೊಮ್ಮಗನಿಂದ ಪಡೆಯುತ್ತೇವೆ.'

ಇದನ್ನು ಓದಿದ ವ್ಯಕ್ತಿಯೊಬ್ಬ ಒಳಗೆ ಬಂದು ಜಿಲೇಬಿ, ಮೈಸೂರ್ ಪಾಕ್, ಗುಲಾಬ್ ಜಾಮೂನ್ ಮತ್ತು ಹಲ್ವಾ ತಿನಿಸುಗಳನ್ನು ಮನಸಾರೆ ತಿಂದ; ನಂತರ ಮಾಣಿ ಬಂದು ಅವನಿಗೆ ಬಿಲ್ ಕೊಟ್ಟ.

'ಬೋರ್ಡಿನಲ್ಲಿ ಬರೆದಿರುವಂತೆ, ಈ ದುಡ್ಡನ್ನು ನನ್ನ ಮೊಮ್ಮಗ ಕೊಡ್ತಾನೆ' ಎಂದ ಆ ವ್ಯಕ್ತಿ.

'ಈ ಬಿಲ್ಲಿನ ದುಡ್ಡನ್ನು ನಿಮ್ಮ ಮೊಮ್ಮಗನಿಂದಲೇ ತಗೊಳ್ತೀವಿ. ಇದು ನಿಮ್ಮಜ್ಜನ ಬಿಲ್!' ಎಂದಾಗ ಆ ವ್ಯಕ್ತಿ ಮೂರ್ಛೆ ಹೋಗುವುದೊಂದೇ ಬಾಕಿಯಿತ್ತು.

***

ಭೀಮ ಮತ್ತು ರಾವಣನ ಪಾತ್ರ ಮಾಡುವ ಪ್ರಸಿದ್ಧ ನಟನನ್ನು ವರದಿಗಾರನೊಬ್ಬ ಪ್ರಶ್ನಿಸಿದ –'ನಿಮ್ಮ ಆರೋಗ್ಯದ ಗುಟ್ಟೇನು?'

ನಟ ಸ್ವಲ್ಪ ಹೊತ್ತು ಯೋಚಿಸಿದ ನಂತರ ಹೇಳಿದ –'ಈ ಪ್ರಶ್ನೆಗೆ ಹದಿನೈದು ದಿನಗಳ ನಂತರ ಉತ್ತರವನ್ನು ಕೊಡಬಲ್ಲೆ.'

'ಏಕೆ? ಈಗ್ಲೇ ಕೊಡಬಹುದಲ್ಲ?'

'ನಾನೀಗ ಹೇಳಲಾರೆ. ಏಕೆಂದರೆ ಮೈಕಟ್ಟು ಗಟ್ಟಿಯಾಗಲು 'ಟಾನಿಕ್' ತಯಾರಿಸುವ ಎರಡು ಕಂಪನಿಗಳು ನನ್ನೊಂದಿಗೆ ವ್ಯವಹರಿಸುತ್ತಿವೆ. ನನ್ನ ಮಾಡಲಿಂಗ್‌ಗೆ ಯಾವ ಕಂಪನಿ ಹೆಚ್ಚು ಹಣವನ್ನು ಕೊಡುತ್ತೋ, ಗೊತ್ತಿಲ್ಲ. ಅದು ಇನ್ನು ಹದಿನೈದು ದಿನಗಳ ನಂತರ ಗೊತ್ತಾಗುತ್ತೆ. ಆ ಟಾನಿಕ್ ನನ್ನ ಆರೋಗ್ಯದ ರಹಸ್ಯಕ್ಕೆ ಕಾರಣವಾಗುತ್ತದೆ' ಎಂದ ನಟ.

***

ಕ್ಷೌರಿಕನೊಬ್ಬ ಪ್ರಸಿದ್ಧ ಪೈಲ್ವಾನರಿಗೆ ಕ್ಷೌರ ಮಾಡುತ್ತಿದ್ದ. ಕ್ಷೌರದ ಮಧ್ಯೆ ಅವನು ಪೈಲ್ವಾನರನ್ನು ಕೇಳಿದ –'ಸ್ವಾಮಿ, ತಪ್ಪು ತಿಳೀಬೇಡಿ. ಒಂದು ವೇಳೆ ನಾನು ನಿಮ್ಮನ್ನು ಬೋಳು ಮಾಡಿದರೆ, ನಿಮ್ಮ ಗುರ್ತು ಯಾರಿಗಾದ್ರು ಸಿಗುತ್ತಾ?'

'ಸಿಗಲ್ಲ, ಆದ್ರೆ ನಿನ್ನ ಗುರ್ತು ಸಿಗದಂತೆ ನಾನು ನಿನಗೆ ಒದೆಯಬೇಕಾಗುತ್ತೆ!' ಎಂದರು ಆ ಪೈಲ್ವಾನರು.

***

'ನೀವು ನಿಮ್ಮ ಬೈತಲೆಯಲ್ಲಿ ಹಸುರು ಬಣ್ಣವನ್ನೇಕೆ ಹಚ್ಚಿ ಕೊಳ್ತೀರ? ವಿವಾಹಿತ ಮಹಿಳೆಯರು ತಮ್ಮ ಬೈತಲೆಗೆ ಕೆಂಪು ಕುಂಕುಮವನ್ನು ಹಚ್ಚಿಕೊಳ್ತಾರಲ್ವಾ?' ಒಬ್ಬ ವಿವಾಹಿತೆ ಪ್ರಶ್ನಿಸಿದಳು.



ಈ ಪ್ರಶ್ನೆಗೆ ಆ ವಿವಾಹಿತೆ ಉತ್ತರಿಸಿದ್ದು ಹೀಗೆ – 'ನಮ್ಮ ಯಜಮಾನ್ರು ರೈಲ್ವೆ ಇಲಾಖೆಯಲ್ಲಿ ಡ್ರೈವರ್ ಆಗಿದ್ದಾರೆ. ನಾನು ಕುಂಕುಮ ಹಚ್ಚಿಕೊಂಡರೆ, ಅವರು ನಿಂತು ಬಿಡ್ತಾರೆ. ಅವರು ನನ್ನನ್ನು ನೋಡಿ ನಿಲ್ಲಬಾರ್ದು, ಮುಂದಕ್ಕೆ ಹೋಗ್ಬೇಕು ಅಂತ ನನ್ನ ಬೈತಲೆಗೆ ಹಸಿರು ಬಣ್ಣವನ್ನು ಹಚ್ಚಿಕೊಳ್ತೀನಿ!'

***

'ಅಜ್ಜಿ, ನಿಮ್ಮ ಕನ್ನಡಕದಲ್ಲಿ ಎಲ್ಲಾ ವಸ್ತುಗಳು ದೊಡ್ಡದಾಗಿ ಕಾಣ್ತವೆಯೇ?' ಮೊಮ್ಮಗಳು ಅಜ್ಜಿಯನ್ನು ಪ್ರಶ್ನಿಸಿದಳು.



'ಹೌದಮ್ಮ, ಏಕೆ ಹೀಗೆ ಕೇಳ್ತಿದ್ದೀ?'

'ಇನ್ಮೇಲೆ ನೀವು ನನಗೆ ಕೇಕ್ ಕೊಡುವಾಗ ನಿಮ್ಮ ಕನ್ನಡಕವನ್ನು ತೆಗೆದು ಕೇಕ್ ಕೊಡಿ!' ಎಂದು ಮೊಮ್ಮಗಳು ಕನ್ನಡಕವನ್ನು ಅಜ್ಜಿಯ ಕಣ್ಣುಗಳಿಂದ ತೆಗೆದಳು.

***

ಲಂಡನ್ನಿನ ಒಂದು ಫ್ಯಾಷನ್‌ಮಾಲ್‌ನಿಂದ ಒಬ್ಬ ವ್ಯಕ್ತಿ ಒಂದು ಬಂಡಲ್ ಹಿಡಿದು ಓಡುತ್ತಿರುವುದನ್ನು ನೋಡಿ, ಅಲ್ಲಿದ್ದ ಪೊಲೀಸ್ ಕಾನ್‌ಸ್ಟೇಬಲ್‌ಗೆ ಅನುಮಾನ ಬಂದು ಅವನನ್ನು ತಡೆದ –'ಹೀಗೇಕೆ ಓಡ್ತಿದ್ದೀಯ? ಈ ಬಂಡಲ್‌ನಲ್ಲಿ ಬಾಂಬ್ ಇಲ್ಲ ತಾನೇ?'

'ಈ ಬಂಡಲ್‌ನಲ್ಲಿ ನನ್ನ ಪ್ರೇಯಸಿಯ ಹೊಸ ಉಡುಪುಗಳಿವೆ. ತಡಮಾಡಿದರೆ ಫ್ಯಾಷನ್‌ನಲ್ಲಿ ಮತ್ತೆ ಬದಲಾವಣೆಯಾಗಿಬಿಟ್ಟೀತು! ಅದಕ್ಕೆ ಉಡುಪುಗಳನ್ನು ಅವಳಿಗೆ ಕೊಡಲು ಓಡುತ್ತಿದ್ದೇನೆ' ಎನ್ನುತ್ತಾ ಆ ವ್ಯಕ್ತಿ ಮತ್ತೆ ಓಡಿದ.

***

'ನೀನು ಕಾರನ್ನು ಕಂಡೊಡನೆಯೇ ಏಕೆ ಹೆದರ್ತೀಯ?'

'ಅದಕ್ಕೊಂದು ಕಾರಣವಿದೆ.'

'ಏನದು?

'ಕಳೆದ ತಿಂಗಳು ನಾನು ಮಧ್ಯಾಹ್ನ ಸುಮಾರು ನಾಲ್ಕು ಗಂಟೆಗೆ ನನ್ನ ಹೆಂಡತಿಯೊಂದಿಗೆ ಹೋಗ್ತಿದ್ದೆ. ಆಗ ಕಾರೊಂದು ನಮ್ಮ ಬಳಿ ನಿಂತಿತು. ಇಬ್ಬರು ಕಾರಿನಿಂದ ಹೊರ ಬಂದು ನನ್ನ ಹೆಂಡತಿಯನ್ನು ಕಾರಿನಲ್ಲಿ ಹಾಕಿಕೊಂಡು ಹೋದರು.'

'ಅಯ್ಯೋ!'

'ಈಗ ಯಾವ ಕಾರಾದರೂ ನನ್ನ ಪಕ್ಕದಿಂದ ಹೋದರೆ ಭಯವಾಗುತ್ತೆ.'

'ಏಕೆ?'

'ಮತ್ತೆ ನನ್ನ ಹೆಂಡತಿಯನ್ನು ನನ್ನ ಬಳಿಗೆ ಕಾರಿನಲ್ಲಿ ತಂದು ಬಿಟ್ಟರೆ ಎಂಬ ಭಯ!'

***

ಭೂಗೋಳದ ಪಾಠವನ್ನು ಬೋಧಿಸುವ ಅಧ್ಯಾಪಕರೊಬ್ಬರು ಅಂದು ಸೂರ್ಯ ಮತ್ತು ಚಂದ್ರ ಗ್ರಹಣದ ಪಾಠ ಹೇಳಿದ ನಂತರ ತಮ್ಮ ಮನಸ್ಸಿನಲ್ಲಿ ಹೀಗೆ ಹೇಳಿಕೊಂಡು ವ್ಯಥೆ ಪಟ್ಟರು. 'ಭೂಗೋಳದಲ್ಲಿ ಸೂರ್ಯ ಗ್ರಹಣ ಮತ್ತು ಚಂದ್ರಗ್ರಹಣದ ಪಾಠವಿದೆ. ಆದರೆ ಪಾಣಿಗ್ರಹಣದ ಬಗ್ಗೆ ಇಲ್ಲ. ವಿವಾಹದ ಸಮಯದಲ್ಲಿ ಈ ಪಾಣಿಗ್ರಹಣ ಮನುಷ್ಯನ ಮೇಲೆ ಬೀರುವ ಪರಿಣಾಮ ತುಂಬ ಮಾರಕ! ಆದರೆ ಮನುಷ್ಯ ಈ ಪಾಣಿಗ್ರಹಣದ ಪರಿಣಾಮಗಳನ್ನು ತಿಳಿದೂ ತಿಳಿದೂ, ಈ ಪಾಣಿಗ್ರಹಣ ನನ್ನ ಮೇಲೆ ಬೀಳಲೆಂದು ಕಾತರಿಸುವುದು ಎಷ್ಟು ಹಾಸ್ಯಾಸ್ಪದ!'

–ಹಿಂದಿಯಿಂದ ಸಂಗ್ರಹ:
**ಡಿ.ಎಸ್. ಶ್ರೀನಾಥ್**